# <u>ಸುಮ್ಮನೆ ದೊರಕುವುದೇ ಶ್ರೀರಾಮನ</u>

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page No. 69.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 303.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 565.
4. **Note:** The lyrics (given without highlights) are as per Ref. 2 and Ref. 3. They are fully matching and almost similar to that of the singer. Few differences in Ref. 1 above are given in green highlights.

ರಾಗ: ಆನಂದಭೈರವಿ ತಾಳ: ತ್ರಿಪುಟ

ಸುಮ್ಮನೆ ದೊರಕುವದೇ ಶ್ರೀರಾಮನ ದಿವ್ಯನಾಮವು || ಪ ||
ಜನ್ಮ ಜನ್ಮಾಂತರದ ದುಷ್ಕರ್ಮ ಹೋದವಗಲ್ಲದೆ || ಅಪ ||

ಭಕ್ತಿ ರಸದಲಿ ತನ್ನ ಚಿತ್ತ ಪರವಶನಾಗಿ
ಅಚ್ಯುತನ ನಾಮವನು ಬಚ್ಚಿಟ್ಟುಕೊಂಡವಗಲ್ಲದೆ || 1 ||

ಕಂತುಪಿತನ (ದಿವ್ಯನಾಮ) ಅಂತರಂಗದೊಳಿಟ್ಟು (ಮೂರುತಿಯ)
ಚಿಂತೆಯೆಲ್ಲ ಬಿಟ್ಟು ನಿಶ್ಚಿಂತನಾದವಗಲ್ಲದೆ || 2 ||

ಕಣ್ಣೊಳಗಿದ್ದ ಮೂರುತಿ ತನ್ನೊಳಗೆ ತಂದು
ಘನ್ನಪೂರ್ಣ ಪುರಂದರ ವಿಠಲನ ಭಜಿಸದೆ || 3 ||
(ತನ್ನೊಳಗೆ ಇದ್ದ ಮೂರುತಿಯ ಕಣ್ಣೊಳಗೆ ತಂದರೆ
ಆನಂದ ಪೂರ್ಣ ಪುರಂದರ ವಿಠ್ಠಲನ ನೋಡಿದಗಲ್ಲದೆ)

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಜನ್ಮ ಜನ್ಮಾಂತರದ ದುಷ್ಕರ್ಮ...** – ಸಂಚಿತವಾದ ಕರ್ಮದ ವಾಸನೆಗಳು, ಕರ್ಮ ಫಲ ಭೋಗದಿಂದಲೂ, ಪುಣ್ಯ ಕರ್ಮಗಳಿಂದಲೂ, ಪ್ರಾಯಶ್ಚಿತ್ತದಿಂದಲೂ, ಗುರುಕರುಣೆಯಿಂದಲೂ ಸವೆದ ಮೇಲೆ ಪರಮಾತ್ಮನಲ್ಲಿ ಮನಃ ಪ್ರಾವಣ್ಯ ಒದಗುತ್ತದೆ.

**ಬಚ್ಚಿಟ್ಟುಕೊಂಡವಗಲ್ಲದೆ** – ನಾಮಸ್ಮರಣೆಯನ್ನು ಅಜಪಾಗಾಯತ್ರಿಯ ಮೂಲಕ (ಹಂಸಮಂತ್ರ ವಿಧಾನದಲ್ಲಿ) ಮಾಡುವವನಿಗಲ್ಲದೆ.

**ಬಚ್ಚಿಟ್ಟುಕೊಳ್ಳು** = ಹೃದಯದಲ್ಲಿ ಇರಿಸಿಕೊಳ್ಳು, ಏಕಾಂತ ಭಕ್ತಿಯನ್ನು ಮಾಡು

**ಅಂತರಂಗದೊಳಿಟ್ಟು** – ಮಾನಸ ಪೂಜಾಕ್ರಮ.

**ಚಿಂತೆಯೆಲ್ಲವ** – ಪ್ರಾಪಂಚಿಕವಾದ ಚಿಂತೆಯನ್ನೂ, ಸಾಧನೆಯ ವಿಚಾರವಾಗಿ ಸಂಶಯವನ್ನೂ ಬಿಟ್ಟು, 'ರಕ್ಷಿಷ್ಯತಿ' (ಎಂದರೆ ಸಲಹುವನು) ಎಂಬ ವಿಶ್ವಾಸದಿಂದ.

**ಕಣ್ಣೊಳಗಿದ್ದ ಮೂರುತಿ...** – ಬಲಗಣ್ಣಿನಲ್ಲಿರುವ ವಿಶ್ವನಾಮಕ ಪರಮಾತ್ಮನನ್ನು ತನ್ನ ಹೃದಯ ಗುಹೆಯಲ್ಲಿರುವ ಬಿಂಬರೂಪೀ ಪರಮಾತ್ಮನೆಂದು.

**Classification:** Keerthane
**Ankita:** purandara vittala
**Location:** NA
**Category:** Mukti Marga, Aartha Bhava,
**Sub-Category:** rama, kannu, purna, janma, chitta, achyuta, Ananda
**Pravachana:** NA
**Explanation:** NA